ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 1622

ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 20-03-2020

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಹೊಸ ಮೋಟಾರು ವಾಹನ ಕಾಯ್ದೆ, 2019ರ ಅನ್ವಯ ವಿಧಿಸಲಾಗುತ್ತಿರುವ ಹೆಚ್ಚಿನ ಫೈನ್/ಪೆನಾಲ್ಟಿಯಿಂದ, ಸಂಚಾರ ನಿಯಮಗಳ ಉಲ್ಲಂಘನೆಯ ಪ್ರಕರಣಗಳು ಕಡಿಮೆ ಆಗಿರುತ್ತವೆಯೇ;	ಇಲ್ಲ. ರಸ್ತೆ ಸಂಚಾರವನ್ನು ಸುಗಮಗೊಳಿಸಲು ಮತ್ತು ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಹೆಚ್ಚಿನ ಪ್ರವರ್ತನ ಚಟುವಟಿಕೆಗಳನ್ನು (Enforcement) ಕೈಗೊಳ್ಳಲಾಗುತ್ತಿದ್ದು, ಕೇಂದ್ರ ಮೋಟಾರು ವಾಹನಗಳ (ತಿದ್ದುಪಡಿ) ಕಾಯ್ದೆ, 2019 ರಂತೆ, ಪರಿಷ್ಕೃತ ದಂಡ ಮೊತ್ತ ನಿಗಧಿಪಡಿಸಿರುವುದರಿಂದ ಹೆಚ್ಚಿನ ದಂಡ ಮೊತ್ತ ಹಾಗೂ ಹೆಚ್ಚಿನ ಪ್ರವರ್ತನ ಚಟುವಟಿಕೆಯಿಂದ ಸಂಚಾರ ಅಪಘಾತಗಳನ್ನು ಕಡಿಮೆಗೊಳಿಸಲು ಉಪಯೋಗವಾಗುತ್ತದೆ.
ಆ.	ಈ ಕಾಯ್ದೆಯ ನಿಬಂಧನೆಗಳು ಅನುಷ್ಠಾನವಾಗಿರುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;	ಕೇಂದ್ರ ಮೋಟಾರು ವಾಹನಗಳ (ತಿದ್ದುಪಡಿ) ಕಾಯ್ದೆ, 2019 ನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. ➢ ಸಾರ್ವಜನಿಕರ ತಿಳುವಳಿಕೆಗಾಗಿ ದಿನಪತ್ರಿಕೆಗಳಲ್ಲಿ ಪ್ರಚಾರ ಮಾಡಿ ಅರಿವು ಮೂಡಿಸಲಾಗುತ್ತಿದೆ. ➢ ಪ್ರತಿ ಠಾಣಾ ಮಟ್ಟದಲ್ಲಿ ಮುಖ್ಯ ಜಂಕ್ಷನ್‌ಗಳಲ್ಲಿ ಪಬ್ಲಿಕ್ ಅಡ್ರಸ್ ಸಿಸ್ಟಮ್ ಮುಖಾಂತರ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ. ➢ ಶಾಲಾ ಕಾಲೇಜುಗಳಲ್ಲಿ ಸಂಚಾರ ಅರಿವು ಕಾರ್ಯಕ್ರಮಗಳನ್ನು ನಡೆಸಿ ಬಿತ್ತಿ ಪತ್ರಗಳನ್ನು ಹಂಚಲಾಗಿರುತ್ತದೆ. ➢ ಇಲಾಖಾ ವಾಹನಗಳನ್ನು ಬಳಸಿಕೊಂಡು ಸಾರ್ವಜನಿಕರಲ್ಲಿ/ವಾಹನ ಸವಾರರಲ್ಲಿ ಅರಿವು ಮೂಡಿಸಲಾಗುತ್ತಿದೆ. ➢ ಸಾಮಾಜಿಕ ಜಾಲತಾಣಗಳಾದ ವಾಟ್ಸ್‌ಅಪ್, ಟ್ವಿಟರ್, ಫೇಸ್‌ಬುಕ್‌ಗಳ ಮೂಲಕ ಅರಿವು ಮೂಡಿಸಲಾಗುತ್ತಿದೆ. ➢ ರಸ್ತೆ ಸುರಕ್ಷತಾ ಸಪ್ತಾಹ ಆಚರಿಸುವ ಸಂದರ್ಭದಲ್ಲಿಯೂ ಸಹ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ. ಕೇಂದ ಮೋಟಾರು ವಾಹನಗಳ (ತಿದ್ದುಪಡಿ) ಕಾಯ್ದೆ 2019ರ ಪ್ರಕಾರ, ವಿವಿಧ ಸಂಚಾರಿ ಅಪರಾಧಗಳಿಗೆ ದಂಡಗಳ ಮೊತ್ತ ವನ್ನು ನಿಗದಿಪಡಿಸಿ ರಾಜ್ಯ ಸರ್ಕಾರವು ಅಧಿಸೂಚನೆ ಸಂಖ್ಯೆ:ಟಿಡಿ 250 ಟಿಡಿಒ 2019, ಬೆಂಗಳೂರು, ದಿ:3-9-2019ನ್ನು ಹೊರಡಿಸಲಾಗಿತ್ತು. ಆದರೆ, ದಂಡಗಳ ಮೊತ್ತವು ಹೆಚ್ಚಾಗಿದೆ ಎಂದು ಸಾರಿಗೆ ವಲಯದ ವಿವಿಧ ಸಂಘಟನೆಗಳು ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ, ದಂಡಗಳ ಮೊತ್ತವನ್ನು ಮರು ನಿಗದಿಪಡಿಸಿ ದಿ:21-9-2019ರಂದು ಅಧಿಸೂಚನೆಯನ್ನು ಹೊರಡಿಸಿದ್ದು, ಸದರಿ ಅಧಿಸೂಚನೆಯನ್ನು ಪೊಲೀಸ್ ಇಲಾಖೆ ಸೇರಿದಂತೆ ಸಾರಿಗೆ ಇಲಾಖೆಯ ಎಲ್ಲಾ ಅಧೀನ ಕಛೇರಿಗಳಿಗೆ ಸದರಿ ಅಧಿಸೂಚನೆಯ ಪ್ರಕಾರ ಕ್ರಮ ಕೈಗೊಳ್ಳಲು ಸೂಚಿಸ ಲಾಗಿರುತ್ತದೆ. ಅದರಂತೆ, ಸೆಪ್ಟೆಂಬರ್ 2019 ರಿಂದ ಜನವರಿ 2020ರ ಅವಧಿಯಲ್ಲಿ ಮೋಟಾರು ವಾಹನಗಳ ಕಾಯ್ದೆ 1988 ಮತ್ತು ಅದರಡಿ ರಚಿತವಾದ ನಿಯಮಗಳನ್ನು ಉಲ್ಲಂಘಿಸಿದ ಅಪರಾಧಕ್ಕಾಗಿ ಒಟ್ಟು 9,15,313 ವಾಹನಗಳನ್ನು ತಪಾಸಣೆ ಮಾಡಿ, 1,02,263 ಪ್ರಕರಣಗಳನ್ನು ದಾಖಲಿಸಿ, 3,624 ವಾಹನ ಗಳನ್ನು ವಶಪಡಿಸಿಕೊಂಡು ತೆರಿಗೆ ಮತ್ತು ದಂಡ ರೂಪದಲ್ಲಿ ಒಟ್ಟು ರೂ.97,59,06,698/-ಗಳನ್ನು ವಸೂಲು ಮಾಡಲಾಗಿದೆ. ಸದರಿ ಪ್ರವರ್ತನ ಕಾರ್ಯವನ್ನು ನಿರಂತರವಾಗಿ ಕೈಗೊಳ್ಳ ಲಾಗುವುದು.

ಇ.	ಈ ಕಾಯ್ದೆಯ ಪ್ರಮುಖ ಅಂಶಗಳನ್ನು ಜಾರಿಗೊಳಿಸಿ, ನಿಯಮಗಳನ್ನು ಅನುಸರಣೆಗೊಳಿಸುವ ಹಂತದಲ್ಲಿ ಪೊಲೀಸ್ ಇಲಾಖೆಯಿಂದ ಮತ್ತು ಸಾರಿಗೆ ಇಲಾಖೆಯಿಂದ ನಡೆಯಬಹುದಾದ ಅಕ್ರಮಗಳು / ಭ್ರಷ್ಟಾಚಾರಗಳನ್ನು ತಡೆಯಲು ಸರ್ಕಾರ ರೂಪಿಸಿರುವ ಕಾರ್ಯ ವಿಧಾನಗಳೇನು;	ಕೇಂದ್ರ ಮೋಟಾರು ವಾಹನಗಳ (ತಿದ್ದುಪಡಿ) ಕಾಯ್ದೆ, 2019 ರ ಪ್ರಮುಖ ಅಂಶಗಳನ್ನು ಜಾರಿಗೊಳಿಸಿ, ನಿಯಮಗಳನ್ನು ಅನುಸರಣೆಗೊಳಿಸುವ ಹಂತದಲ್ಲಿ ಪಾರದರ್ಶಕತೆ ತರಲು ಪೊಲೀಸ್ ಇಲಾಖೆ ಮತ್ತು ಸಾರಿಗೆ ಇಲಾಖೆಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. ➢ ಪಿ.ಡಿ.ಎ (ಪರ್ಸನಲ್ ಡಿಜಿಟಲ್ ಅಸಿಸ್ಟೆಂಟ್) ಉಪಕರಣಗಳನ್ನು ಎ.ಎಸ್.ಐ, ಪಿ.ಎಸ್.ಐ ಮತ್ತು ಪಿ.ಐ ಹಂತದವರೆಗಿನ ಅಧಿಕಾರಿಗಳಿಗೆ ಹಂಚಿಕೆ ಮಾಡಲಾಗಿದ್ದು, ಇದರ ಮೂಲಕ ಸಂಚಾರ ನಿಯಮಗಳನ್ನು ಉಲ್ಲಂಘಿಸುವ ಚಾಲಕರುಗಳ ವಿರುದ್ಧ ಸ್ಥಳದಲ್ಲೇ ಸಂಚಾರ ಪೊಲೀಸ್ ಅಧಿಕಾರಿಗಳು ಪ್ರಕರಣಗಳನ್ನು ದಾಖಲಿಸಿ ಸ್ಥಳದಂಡವನ್ನು ಪಾವತಿಸಿಕೊಳ್ಳುವ ವ್ಯವಸ್ಥೆ ಕಲ್ಪಿಸಲಾಗಿದೆ. ➢ ಬೆಂಗಳೂರು ನಗರ ಸಿ.ಬಿ.ಡಿ ಏರಿಯಾದಲ್ಲಿ ಸಮರ್ಪಕ ನಿಯಮ ಜಾರಿ ವೇಳೆ ಉಪಯೋಗಿಸಲು ಸಂಚಾರ ಪೊಲೀಸ್ ಅಧಿಕಾರಿಗಳಿಗೆ ಆಧುನಿಕ ತಂತ್ರಜ್ಞಾನವುಳ್ಳ ಬಾಡಿವೋರ್ನ್ ಕ್ಯಾಮೆರಾವನ್ನು ಹಂಚಿಕೆ ಮಾಡಲಾಗಿದೆ. ➢ ಸಂಚಾರ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಕ್ರಮ ಕೈಗೊಳ್ಳಲು ಅನುವಾಗುವಂತೆ ನಗರದ ಪ್ರಮುಖ ಸ್ಥಳಗಳಲ್ಲಿ ಕಣ್ಗಾವಲು ಕ್ಯಾಮರಾಗಳನ್ನು ಅಳವಡಿಸಲಾಗಿದ್ದು ಅವುಗಳ ಸಹಾಯದಿಂದ ವಾಹನಗಳ ಛಾಯಾಚಿತ್ರವನ್ನು ಸೆರೆಹಿಡಿದು ಕ್ರಮ ಕೈಗೊಳ್ಳಲಾಗುತ್ತಿದೆ. ➢ ಜಂಕ್ಷನ್‌ಗಳಲ್ಲಿ ಕರ್ತವ್ಯ ನಿರ್ವಹಿಸುವ ಸಂಚಾರ ಪೊಲೀಸರಿಗೆ ಡಿಜಿಟಲ್ ಕ್ಯಾಮೆರಾಗಳನ್ನು ವಿತರಿಸಿ ಅವುಗಳ ಸಹಾಯದಿಂದ ಸಂಚಾರ ನಿಯಮ ಉಲ್ಲಂಘನೆ ಎಸಗುವ ವಾಹನಗಳ ಛಾಯಾಚಿತ್ರಗಳನ್ನು ಸೆರೆಹಿಡಿದು ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗುತ್ತಿದೆ. ➢ ಸಾಮಾಜಿಕ ತಾಣವಾದ ಫೇಸ್‌ಬುಕ್ ಮುಖಾಂತರ ಸಾರ್ವಜನಿಕರು ಸಂಚಾರ ಪೊಲೀಸರ ಛಾಯಾಚಿತ್ರವನ್ನು ಸೆರೆಹಿಡಿದು ದೂರು ದಾಖಲಿಸಿದಲ್ಲಿ ಅಂತಹ ಸಿಬ್ಬಂದಿಗಳ ವಿರುದ್ಧ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳಲಾಗುವುದು. ➢ ಸಾಮಾಜಿಕ ತಾಣವಾದ ಟ್ವಿಟರ್ ಮುಖಾಂತರ ಸಾರ್ವಜನಿಕರು ಸಂಚಾರ ಪೊಲೀಸರ ಛಾಯಾಚಿತ್ರವನ್ನು ಸೆರೆಹಿಡಿದು ದೂರು ದಾಖಲಿಸಿದಲ್ಲಿ ಅಂತಹ ಸಿಬ್ಬಂದಿಗಳ ವಿರುದ್ಧ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳಲಾಗುವುದು. ➢ ಪಬ್ಲಿಕ್ ಐ ಮೂಲಕವು ಸಹ ಸಾರ್ವಜನಿಕರು ಸಂಚಾರ ಪೊಲೀಸರ ಛಾಯಾಚಿತ್ರವನ್ನು ಸೆರೆಹಿಡಿದು ದೂರು ದಾಖಲಿಸಿದಲ್ಲಿ ಅಂತಹ ಸಿಬ್ಬಂದಿಗಳ ವಿರುದ್ಧ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳಲಾಗುವುದು. ➢ ಇ-ಮೇಲ್ ಮೂಲಕವು ಸಹ ಸಾರ್ವಜನಿಕರು ಸಂಚಾರ ಪೊಲೀಸರ ವಿರುದ್ಧ ದೂರು ದಾಖಲಿಸಿದಲ್ಲಿ ಅಂತಹ ಸಿಬ್ಬಂದಿಗಳ ವಿರುದ್ಧ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳಲಾಗುವುದು. ➢ Toll Free 103 ಮೂಲಕವು ಸಹ ಸಾರ್ವಜನಿಕರು ಭ್ರಷ್ಟಾಚಾರದಲ್ಲಿ ತೊಡಗಿರುವ ಸಂಚಾರ ಪೊಲೀಸರ ವಿರುದ್ಧ ದೂರು ದಾಖಲಿಸಬಹುದು. ➢ ವಾಹನಗಳ ತಪಾಸಣೆಯ ಹೆಸರಿನಲ್ಲಿ ವಾಹನ ಚಾಲಕ/ಸವಾರರುಗಳಿಗೆ ಕಿರುಕುಳ ನೀಡದಿರುವ ಬಗ್ಗೆ ಸಿಬ್ಬಂದಿಗಳಿಗೆ ನಿರಂತರವಾಗಿ ತಿಳುವಳಿಕೆ ನೀಡುತ್ತಾ ಅಂತಹ ಯಾವುದೇ ಸಾರ್ವಜನಿಕ ದೂರುಗಳು ಬಂದಲ್ಲಿ ನಿರ್ದಾಕ್ಷಿಣ್ಯವಾಗಿ ಸೂಕ್ತ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಬಗ್ಗೆ ಕಾಲಕಾಲಕ್ಕೆ ಜ್ಞಾಪನ, ಸುತ್ತೋಲೆಗಳ ಮೂಲಕ ಹಾಗೂ ಸಭೆಗಳಲ್ಲಿ ಸೂಕ್ತ ನಿರ್ದೇಶನಗಳನ್ನು ನೀಡಲಾಗುತ್ತಿದೆ. ➢ ಸಂಚಾರ ಪೊಲೀಸರು ಸಾರ್ವಜನಿಕರಲ್ಲಿ ಅಸಭ್ಯವಾಗಿ ವರ್ತಿಸಿದಲ್ಲಿ ಅಥವಾ ಭ್ರಷ್ಟಾಚಾರದಲ್ಲಿ ತೊಡಗಿದಲ್ಲಿ ಸಾರ್ವಜನಿಕರು ಮೇಲಾಧಿಕಾರಿಗಳಿಗೆ ದೂರು ನೀಡಬಹುದಾಗಿದೆ. ಅಂತಹ ಸಿಬ್ಬಂದಿಗಳ ವಿರುದ್ಧ ವಿಚಾರಣೆ ನಡೆಸಿ ಅಪಾದನೆ ಸಾಬೀತಾದಲ್ಲಿ ಸೂಕ್ತ ಶಿಸ್ತಿನ ಕ್ರಮ ಜರುಗಿಸಲಾಗುವುದು. ➢ ಸಂಚಾರ ನಿಯಮಗಳನ್ನು ಉಲ್ಲಂಘನೆ ಮಾಡುವ ವಿಷಯದಲ್ಲಿ ಪಾರದರ್ಶಕತೆ ತರಲು ವಾಹನ ಚಾಲಕ/ಸವಾರರ ವಿರುದ್ಧ ಎಫ್.ಟಿ.ವಿ.ಆರ್ (ಫೀಲ್ಡ್ ಟ್ರಾಫಿಕ್ ವಯಲೇಷನ್ ರಿಪೋರ್ಟ್) ನಲ್ಲಿ ಪ್ರಕರಣಗಳನ್ನು ನಮೂದಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.

		➢ ಭ್ರಷ್ಟಾಚಾರವನ್ನು ತಡೆಗಟ್ಟುವ ಸಲುವಾಗಿ, ಸ್ಥಳದಂಡ ವಿಧಿಸುವುದನ್ನು ಕಡಿಮೆಗೊಳಿಸಿ, ಸಂಚಾರ ನಿಯಮ ಉಲ್ಲಂಘನೆ ಮಾಡುವ ವಾಹನಗಳ ಫೋಟೋಗಳನ್ನು ತೆಗೆದು ಟಿ.ಎಂ.ಸಿ (ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸೆಂಟರ್) ನಲ್ಲಿ ಸದರಿ ವಾಹನದ ಆರ್.ಸಿ ಮಾಲೀಕರ ವಿಳಾಸಕ್ಕೆ, ದಂಡ ಪಾವತಿಸುವಂತೆ ನೋಟೀಸ್‌ಗಳನ್ನು ಜಾರಿ ಮಾಡಲಾಗುತ್ತಿದೆ. ➢ ಪೊಲೀಸ್ ಸಿಬ್ಬಂದಿಯವರ ಮೇಲೆ ಬಾಡಿವಾರ್ನ್ ಕ್ಯಾಮೆರಾಗಳನ್ನು ನೀಡಿ ಅವರ ಮೇಲೆ ನಿಗ ಇಡಲಾಗುತ್ತಿದೆ. ➢ ಪ್ರತಿ ದಿನ ಸಂಗ್ರಹಿಸುವ ದಂಡದ ಮೊತ್ತವನ್ನು ಮರುದಿನವೆ ಸರ್ಕಾರಕ್ಕೆ ಜಮಾ ಮಾಡಲು ಅಗತ್ಯಕ್ರಮಕೈಗೊಳ್ಳಲಾಗುತ್ತಿದೆ. ಪೊಲೀಸ್ ಇಲಾಖೆ / ಸಾರಿಗೆ ಇಲಾಖೆ ವತಿಯಿಂದ ನಿಯಮಗಳನ್ನು ಅನುಷ್ಠಾನಗೊಳಿಸುವ ಸಂಧರ್ಭದಲ್ಲಿ ಯಾವುದೇ ರೀತಿಯಾದ ಅಕ್ರಮಗಳು / ಭ್ರಷ್ಟಾಚಾರಗಳು ನಡೆಯದಂತೆ ಕ್ರಮಕೈಗೊಳ್ಳಲು ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿದೆ.

ಟಿಡಿ 42 ಟಿಡಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು